**ಮುಖ್ಯ ಚುನಾವಣಾಧಿಕಾರಿಗಳ ಕಛೇರಿ, ಕರ್ನಾಟಕ**

ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು-560 001.

ದೂರವಾಣಿ ಸಂಖ್ಯೆ 080-22224212


**No.**DPAR 08 CHUVISA (MC) 2023 **Date:** 18.04.2023

# ಪತ್ರಿಕಾ ಪ್ರಕಟಣೆ

## 1. ನಾಮಪತ್ರಗಳು 18.04.2023:

| ಕರ್ನಾಟಕ ಸಾರ್ವತ್ರಿಕ ವಿಧಾನಸಭೆ ಚುನಾವಣೆ- 2023 | | | |
|---|---|---|---|
| **4ನೇ ದಿನ (18.04.2023)** | | | |
| ನಾಮಪತ್ರಗಳು | ವಿವರ | ನಾಮಪತ್ರಗಳು | ಅಭ್ಯರ್ಥಿಗಳು* |
| ಸ್ವೀಕರಿಸಲಾದ ನಾಮಪತ್ರಗಳ ವಿವರ | ಒಟ್ಟು | **770** | **621** |
| | ಪುರುಷ | 703 | 564 |
| | ಮಹಿಳೆ | 67 | 57 |
| | ಇತರೆ | 0 | 0 |
| ಮಾನ್ಯತೆ ಪಡೆದ ರಾಷ್ಟ್ರೀಯ/ರಾಜ್ಯ ಪಕ್ಷಗಳ ನಾಮಪತ್ರ ಸಲ್ಲಿಕೆ | ಪಕ್ಷವಾರು ನಾಮಪತ್ರ ಸ್ವೀಕರಿಸಿದ ವಿವರ **18.04.2023** | | |
| | ಎಎಪಿ | 61 | |
| | ಬಿಎಸ್‌ಪಿ | 20 | |
| | ಬಿಜೆಪಿ | 130 | |
| | ಸಿಪಿಐಎಂ | 1 | |
| | ಕಾಂಗ್ರೆಸ್ | 116 | |
| | ಎನ್‌ಪಿಪಿ | 0 | |
| | ಜೆಡಿಎಸ್ | 75 | |
| ನೋಂದಾಯಿತ ಪಕ್ಷಗಳಿಂದ ಗುರುತಿಸಿದ ನಾಮಪತ್ರಗಳು | | 161 | |
| ಸ್ವತಂತ್ರ ಅಭ್ಯರ್ಥಿಗಳ ನಾಮಪತ್ರ | | 206 | |
| ಒಟ್ಟು | | **770** | |

**ಸೂಚನೆ*** ಒಬ್ಬ ಅಭ್ಯರ್ಥಿಯು ಒಂದಕ್ಕಿಂತ ಅಧಿಕ ಬಾರಿ ನಾಮಪತ್ರ ಸಲ್ಲಿಸಿದ್ದರೂ ಕೂಡಾ ಒಬ್ಬನೇ ಅಭ್ಯರ್ಥಿ ಎಂದು ಪರಿಗಣಿಸಬೇಕು.

**2. ಮಾದರಿ ನೀತಿ ಸಂಹಿತೆ ಚುನಾವಣಾ ವೆಚ್ಚ ಮತ್ತು ಕಾನೂನು ಮತ್ತು ಸುವ್ಯವಸ್ಥೆ ಜಾರಿ:**

ಚುನಾವಣೆಯ ವಿವಿಧ ಜಾಗೃತ ದಳಗಳಿಂದ ಸಂಗ್ರಹಿಸಿದ ಮಾಹಿತಿಯ ಆಧಾರದ ಮೇಲೆ ಮಾದರಿ ನೀತಿ ಸಂಹಿತೆ, ಚುನಾವಣಾ ವೆಚ್ಚ ಹಾಗೂ ಕಾನೂನು ಮತ್ತು ಸುವ್ಯವಸ್ಥೆಯನ್ನು ಉಲ್ಲಂಘಿಸಿರುವ ಕುರಿತು ದಿನಾಂಕ 29.03.2023 ರಿಂದ ಇಲ್ಲಿಯವರೆಗೆ ಈ ಕೆಳಗಿನ ಮಾಹಿತಿಗಳನ್ನು ಒದಗಿಸಲಾಗಿದೆ.

**ಅ. ವಶಪಡಿಸಿಕೊಂಡ ಸಂಚಿತ ವಿವರ 18.04.2023:**

2023 ರ ಕರ್ನಾಟಕ ಸಾರ್ವತ್ರಿಕ ವಿಧಾನಸಭೆ ಚುನಾವಣೆಗೆ ದಿನಾಂಕ 29.03.2023 ರಿಂದ ಮಾದರಿ ನೀತಿ ಸಂಹಿತೆ ಜಾರಿಗೆ ಬಂದಿದ್ದು, ದಿನಾಂಕ 17.04.2023 ರ ವರೆಗೆ ಚುನಾವಣಾ ಜಾಗೃತ ತಂಡಗಳು ವಶಪಡಿಸಿಕೊಂಡಿರುವ ಒಟ್ಟು ನಗದು, ಮದ್ಯ, ಮಾದಕ ದ್ರವ್ಯಗಳು, ಬೆಲೆ ಬಾಳುವ ಲೋಹಗಳು ಮತ್ತು ಉಚಿತ ಉಡುಗೂರೆ ಕೊಡುಗೆಗಳ ಮಾಹಿತಿಯನ್ನು ದಿನಾಂಕ 18.04.2023 ರಂದು ಸ್ವೀಕರಿಸಲಾಗಿದೆ. 2018 ರ ಕರ್ನಾಟಕ ಸಾರ್ವತ್ರಿಕ ವಿಧಾನಸಭೆ ಚುನಾವಣೆಗೆ ಮಾದರಿ ನೀತಿ ಸಂಹಿತೆ ಜಾರಿಗೆ ಬಂದ ಅವಧಿಯಲ್ಲಿ ರೂ. **185.74** ವಶಪಡಿಸಿಕೊಳ್ಳಲಾಗಿತ್ತು. ಸದರಿ 2023 ರ ಚುನಾವಣೆಯಲ್ಲಿ ಈಗಾಗಲೇ ರೂ. **187.17** ಕೋಟಿ ವಶವಾಗಿದ್ದು, ಕಳೆದ ಚುನಾವಣೆಗೆ ಹೂಲಿಸಿದ್ದಲ್ಲಿ ವಶಪಡಿಸಿಕೊಂಡಿರುವ ಮೊತ್ತವು ಮೀರಿದೆ.

ಸದರಿ 2023 ರ ಚುನಾವಣೆಯಲ್ಲಿ ಈ ದಿನಕ್ಕೆ ವಶ ಪಡೆದ ಒಟ್ಟು ಸಂಚಿತ ಮೌಲ್ಯವು 2018 ರ ಚುನಾವಣೆಯ **ಮೂರು ಪಟ್ಟು** ಹೆಚ್ಚಾಗಿದೆ.

2018 ಮತ್ತು 2023 ರಲ್ಲಿ ವಶಪಡಿಸಿಕೊಂಡಿರುವ ನಗದು, ಮದ್ಯ, ಡ್ರಗ್ಸ್/ಮಾದಕ ದ್ರವ್ಯಗಳು, ಅಮೂಲ್ಯ ಲೋಹಗಳು, ಉಚಿತ ಮತ್ತು ಇತರೆ ವಸ್ತುಗಳ ವಿವರ ಈ ಕೆಳಗೆ ನೀಡಲಾಗಿದೆ.

| ವಶಪಡಿಸಿಕೊಂಡ ಸಂಚಿತ ವಿವರ | ಕ.ಸಾ.ವಿ.ಸ.ಚು – 2018 | | ಕ.ಸಾ.ವಿ.ಸ.ಚು – 2018 | | ಕ.ಸಾ.ವಿ.ಸ.ಚು – 2023 | |
|---|---|---|---|---|---|---|
| | (27.03.2018 ರಿಂದ 17.04.2018 ವರಗೆ) | | (27.03.2018 ರಿಂದ 12.05.2018 ವರೆಗೆ) | | (29.03.2023 ರಿಂದ 17.04.2023 ವರೆಗೆ) | |
| | ವರದಿ ದಿನಾಂಕ 18.04.2018 | | ವರದಿ ದಿನಾಂಕ 13.05.2018 | | ವರದಿ ದಿನಾಂಕ 18.04.2023 | |
| | ಪ್ರಮಾಣ | ಮೌಲ್ಯ<br>ರೂ. (ಕೋಟಿ ಲೆಕ್ಕದಲ್ಲಿ) | ಪ್ರಮಾಣ | ಮೌಲ್ಯ<br>ರೂ. (ಕೋಟಿ ಲೆಕ್ಕದಲ್ಲಿ) | ಪ್ರಮಾಣ | **Value**<br>ರೂ. (ಕೋಟಿ ಲೆಕ್ಕದಲ್ಲಿ) |
| ನಗದು | | 30.02 | | 94.3 | | 75.17 |
| ಉಚಿತ ಕೊಡುಗೆಗಳು ಇತರೆ, | | 16.36 | | 21.85 | | 19.05 |
| ಮದ್ಯ | 1,82,615 ltrs | 8.51 | 542297 Ltr | 24.91 | 9,82,756 ltrs | 40.93 |
| ಡ್ರಗ್ಸ್/ಮಾದಕ ದ್ರವ್ಯಗಳು | 30.45 Kgs | 0.20 | 127.057 Kgs | 0.40 | 908.41 Kgs | 15.2 |
| ಬೆಲೆ ಬಾಳುವ ಲೋಹಗಳು ಬಂಗಾರ | 14.492 Kgs | 3.59 | 105.821 | 44.28 | 75.30 Kgs | 33.61 |
| ಬೆಲೆ ಬಾಳುವ ಲೋಹಗಳು ಬೆಳ್ಳಿ | NA | 3.71 | NA | | 454.707 Kgs | 3.21 |
| ಒಟ್ಟು | | **62.39** | | **185.74** | | **187.17** |

## ವಶಪಡಿಸಿಕೊಂಡ ಸಂಚಿತ ವಿವರ 18.04.2023:

| | | | | |
|---|---|---|---|---|
| ನಗದು | | | | |
| ಕಾರ್ಯಚರಣೆ ತಂಡಗಳು | ನಿನ್ನೆದಿನ ವಶಪಡಿಸಿಕೊಂಡ ವಿವರ | ವಶಕ್ಕೆ ಪಡೆದ ಸಂಚಿತ ಒಟ್ಟು ವಿವರ | | |
| ವಿಚಕ್ಷಣ ದಳ/ಸ್ಥಿರ ಕಣ್ಗಾವಲು, ಪೊಲೀಸ್ ಅಧಿಕಾರಿಗಳು | 3,24,25,495 | 59,02,06,017 | | |
| ಆದಾಯ ತೆರಿಗೆ ಇಲಾಖೆ | - | 16,15,21,470 | | |
| ಒಟ್ಟು | **3,24,25,495** | **75,17,27,487** | | |
| ಉಚಿತ ಕೊಡುಗೆಗಳು | | | | |
| ಕಾರ್ಯಚರಣೆ ತಂಡಗಳು | ನಿನ್ನೆದಿನ ವಶಪಡಿಸಿಕೊಂಡ ವಿವರ | ವಶಕ್ಕೆ ಪಡೆದ ಸಂಚಿತ ಒಟ್ಟು ವಿವರ | | |
| ವಿಚಕ್ಷಣ ದಳ/ಸ್ಥಿರ ಕಣ್ಗಾವಲು, ಪೊಲೀಸ್ ಅಧಿಕಾರಿಗಳು | 16,88,475 | 19,04,57,715 | | |
| ಮದ್ಯ | | | | |
| ಕಾರ್ಯಚರಣೆ ತಂಡಗಳು | ನಿನ್ನೆದಿನ ವಶಪಡಿಸಿಕೊಂಡ ವಿವರ | | ವಶಕ್ಕೆ ಪಡೆದ ಸಂಚಿತ ಒಟ್ಟು ವಿವರ | |
| | ಪ್ರಮಾಣ (ಲೀಟರ್) | ಮೌಲ್ಯ (ರೂ.) | ಪ್ರಮಾಣ (ಲೀಟರ್) | ಮೌಲ್ಯ (ರೂ.) |
| ವಿಚಕ್ಷಣ ದಳ/ಸ್ಥಿರ ಕಣ್ಗಾವಲು, ಪೊಲೀಸ್ ಅಧಿಕಾರಿಗಳು | 443.50 | 1,65,155.98 | 24,753.20 | 81,93,809.29 |
| ಅಬಕಾರಿ ಇಲಾಖೆ | 58,892.00 | 2,16,80,452 | 9,58,003.20 | 40,11,10,896 |
| ಒಟ್ಟು | **59,335.50** | **2,18,45,607.98** | **9,82,756.396** | **40,93,04,705** |
| ಡ್ರಗ್ಸ್/ಮಾದಕ ದ್ರವ್ಯಗಳು | | | | |
| ಕಾರ್ಯಚರಣೆ ತಂಡಗಳು | ನಿನ್ನೆ ದಿನ ವಶಪಡಿಸಿಕೊಂಡ ವಿವರ | | ವಶಕ್ಕೆ ಪಡೆದ ಸಂಚಿತ ಒಟ್ಟು ವಿವರ | |
| | ಪ್ರಮಾಣ (ಕೆ.ಜಿ)) | ಮೌಲ್ಯ (ರೂ.) | ಪ್ರಮಾಣ (ಕೆ.ಜಿ)) | ಮೌಲ್ಯ (ರೂ.) |
| ವಿಚಕ್ಷಣ ದಳ/ಸ್ಥಿರ ಕಣ್ಗಾವಲು, ಪೊಲೀಸ್ ಮತ್ತು ಅಬಕಾರಿ ಇಲಾಖೆ ಅಧಿಕಾರಿಗಳು | 87.509 | 8,10,400 | 908.41 | 15,19,99,661 |
| ಬೆಲೆ ಬಾಳುವ ಲೋಹಗಳು | | | | |
| ಕಾರ್ಯಚರಣೆ ತಂಡಗಳು | ನಿನ್ನೆ ದಿನ ವಶಪಡಿಸಿಕೊಂಡ ವಿವರ | | ವಶಕ್ಕೆ ಪಡೆದ ಸಂಚಿತ ಒಟ್ಟು ವಿವರ | |
| | ಪ್ರಮಾಣ (ಕೆ.ಜಿ)) | ಮೌಲ್ಯ (ರೂ.) | ಪ್ರಮಾಣ (ಕೆ.ಜಿ)) | ಮೌಲ್ಯ (ರೂ.) |
| ಬಂಗಾರ, ವಿಚಕ್ಷಣ ದಳ/ಸ್ಥಿರ ಕಣ್ಗಾವಲು, ಪೊಲೀಸ್ ಅಧಿಕಾರಿಗಳು | 8.0765 | 4,80,91,224 | 53.36 | 22,13,75,129 |
| ಬಂಗಾರ (ಆದಾಯ ತೆರಿಗೆ ಇಲಾಖೆ) | 4.96108 | 2,16,59,729 | 21.94 | 11,47,31,168 |
| ಒಟ್ಟು ಬಂಗಾರ | **13.04** | **6,97,50,953** | **75.30** | **33,61,06,297** |
| ಬೆಳ್ಳಿ (ವಿಚಕ್ಷಣ ದಳ /ಸ್ಥಿರ ಕಣ್ಗಾವಲು, ಪೊಲೀಸ್ ಅಧಿಕಾರಿಗಳು) | 52.74 | 41,66,042 | 454.46 | 3,21,01,183 |
| ಬೆಳ್ಳಿ ಆದಾಯ ತೆರಿಗೆ ಇಲಾಖೆ | 0.00 | - | 0.25 | 11,400.00 |
| ಬೆಳ್ಳಿ ಒಟ್ಟು | **52.74** | **41,66,042** | **454.71** | **3,21,12,583** |
| ಒಟ್ಟು ಬಂಗಾರ ಮತ್ತು ಬೆಳ್ಳಿ | **65.78** | **7,39,16,995** | **530.01** | **36,82,18,880** |
| ಒಟ್ಟು | | **13,06,86,973** | | **1,87,17,08,449** |

**ಆ. ಪ್ರಕರಣ ದಾಖಲು:**

- ನಗದು, ಮದ್ಯ, ಮಾದಕ ದ್ರವ್ಯ, ಬೆಲೆಬಾಳುವ ಲೋಹ ಮತ್ತು ಉಡುಗೊರೆ ವಸ್ತುಗಳನ್ನು ವಶಪಡಿಸಿಕೊಂಡಿರುವ ವಿಚಕ್ಷಣ ದಳ, ಸ್ಥಿರ ಕಣ್ಗಾವಲು ತಂಡಗಳು ಮತ್ತು ಪೊಲೀಸ್ ಅಧಿಕಾರಿಗಳು **1,550** ಪ್ರಥಮ ತನಿಖಾ ವರದಿ (FIR) ದಾಖಲಿಸಿದ್ದಾರೆ.
- ಚುನಾವಣೆ ಘೋಷಣೆಯಾದ ದಿನಾಂಕದಿಂದ ಇಲ್ಲಿಯವರೆಗೆ ಒಟ್ಟಾರೆ **69,104** ಶಸ್ತ್ರಾಸ್ತ್ರಗಳನ್ನು ಜಮೆ ಮಾಡಿಸಿಕೊಳ್ಳಲಾಗಿದೆ, **18** ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ. **20** ಶಸ್ತ್ರಾಸ್ತ್ರಗಳ ಪರವಾನಿಗೆ ರದ್ದು ಪಡಿಸಲಾಗಿದೆ. ಸಿಆರ್‌ಪಿಸಿ ಕಾಯ್ದೆಯಡಿ **4,253** ಪ್ರಕರಣಗಳನ್ನು ದಾಖಲಿಸಲಾಗಿದೆ. ಅವುಗಳಲ್ಲಿ **6,468** ವ್ಯಕ್ತಿಗಳಿಂದ ಮುಚ್ಚಳಿಕೆ ಪತ್ರ ಪಡೆಯಲಾಗಿದೆ. ಚುನಾವಣೆ ಘೋಷಣೆಯಾದ ದಿನದಿಂದ ಇಲ್ಲಿಯವರೆಗೆ **10,817** ಜಾಮೀನು ರಹಿತ ವಾರೆಂಟ್‌ಗಳನ್ನು ಜಾರಿಗೊಳಿಸಲಾಗಿದೆ.
- ಅಬಕಾರಿ ಇಲಾಖೆಯು **1,984** ಗಂಭೀರ ಪ್ರಕರಣಗಳನ್ನು ಹಾಗೂ **1,494** ಮದ್ಯದ ಪರವಾನಿಗೆ ಉಲ್ಲಂಘಿಸಿದ ಪ್ರಕರಣಗಳು, **69** ಎನ್‌ಡಿಪಿಎಸ್ ಮತ್ತು ಕರ್ನಾಟಕ ಅಬಕಾರಿ ಕಾಯ್ದೆ 1965ರ ಪರಿಚ್ಛೇದ 15 (ಎ) ಅನ್ವಯ ಒಟ್ಟು **10,193** ಪ್ರಕರಣಗಳನ್ನು ದಾಖಲಿಸಿದೆ ಮತ್ತು **1,338** ವಿವಿಧ ಮಾದರಿಯ ವಾಹನಗಳನ್ನು ಸಹ ವಶಪಡಿಸಿಕೊಳ್ಳಲಾಗಿದೆ.

**ಇ. ವಿಶೇಷ ವರದಿ:**

- ಆದಾಯ ತೆರಿಗೆ ಇಲಾಖೆಯು ಬೆಂಗಳೂರು ನಗರ ಜಿಲ್ಲೆಯ ಹೆಬ್ಬಾಳ ವಿಧಾನಸಭೆ ಕ್ಷೇತ್ರದಲ್ಲಿ ರೂ. **67,54,049** ಮೌಲ್ಯದ **1.448** ಕೆ.ಜಿ ಬಂಗಾರವನ್ನು ವಶಪಡಿಸಿಕೊಂಡಿದೆ.
- ಆದಾಯ ತೆರಿಗೆ ಇಲಾಖೆಯು ಬೆಂಗಳೂರು ನಗರ ಜಿಲ್ಲೆಯ ಚಿಕ್ಕಪೇಟೆ ವಿಧಾನಸಭೆ ಕ್ಷೇತ್ರದಲ್ಲಿ ರೂ. **55,83,905** ಮೌಲ್ಯದ **1.457** ಕೆ.ಜಿ ಬಂಗಾರವನ್ನು ವಶಪಡಿಸಿಕೊಂಡಿದೆ.
- ಆದಾಯ ತೆರಿಗೆ ಇಲಾಖೆಯು ಬೆಂಗಳೂರು ನಗರ ಜಿಲ್ಲೆಯ ಚಿಕ್ಕಪೇಟೆ ವಿಧಾನಸಭೆ ಕ್ಷೇತ್ರದಲ್ಲಿ ರೂ. **93,21,775** ಮೌಲ್ಯದ **2.056** ಕೆ.ಜಿ ಬಂಗಾರವನ್ನು ವಶಪಡಿಸಿಕೊಂಡಿದೆ.
- ವಿಚಕ್ಷಣ ದಳವು ಬೆಂಗಳೂರು ನಗರ ಜಿಲ್ಲೆಯ ಶಾಂತಿನಗರ ವಿಧಾನಸಭೆ ಕ್ಷೇತ್ರದಲ್ಲಿ ರೂ. **4,79,64,024** ಮೌಲ್ಯದ **7.999** ಕೆ.ಜಿ ಬಂಗಾರವನ್ನು ವಶಪಡಿಸಿಕೊಂಡಿದೆ.
- ಸ್ಥಿರಕಣ್ಗಾವಲು ತಂಡವು ಬೆಂಗಳೂರು ಜಿಲ್ಲೆಯಲ್ಲಿ ರೂ. **30,00,000** ನಗದು ವಶಪಡಿಸಿಕೊಂಡಿದೆ.
- ಸ್ಥಿರಕಣ್ಗಾವಲು ತಂಡವು ರಾಮನಗರ ಜಿಲ್ಲೆಯ ರಾಮನಗರ ವಿಧಾನಸಭೆ ಕ್ಷೇತ್ರದಲ್ಲಿ ರೂ. **1,97,03,000** ನಗದು ವಶಪಡಿಸಿಕೊಂಡಿದೆ.
- ಸ್ಥಿರಕಣ್ಗಾವಲು ತಂಡವು ಬೆಂಗಳೂರು ಜಿಲ್ಲೆಯ ಮಹಾದೇವಪುರ ವಿಧಾನಸಭೆ ಕ್ಷೇತ್ರದಲ್ಲಿ ರೂ. **26,62,521** ನಗದು ವಶಪಡಿಸಿಕೊಂಡಿದೆ.

**೩. ಸಾರ್ವಜನಿಕ ಕುಂದುಕೊರತೆಗಳ ಇತ್ಯರ್ಥ:**

ಮತದಾರರ ಸಹಾಯವಾಣಿ ಮೂಲಕ ಸ್ವೀಕರಿಸಲಾದ **9,039** ಕರೆಗಳಲ್ಲಿ **8,891** ಸಾರ್ವಜನಿಕರು ಮಾಹಿತಿ ಕೋರಿದ್ದಾರೆ. **22** ಜನರು ಪ್ರತಿಕ್ರಿಯೆ (ಫೀಡ್‌ಬ್ಯಾಕ್) ನೀಡಿದ್ದಾರೆ. **22** ಜನರು ಸಲಹೆಗಳನ್ನು ನೀಡಿದ್ದಾರೆ ಮತ್ತು **104** ಜನರು ದೂರುಗಳನ್ನು ದಾಖಲಿಸಿದ್ದಾರೆ. ಕರೆಗಳ ಮೂಲಕ ಸ್ವೀಕರಿಸಿದ ಎಲ್ಲಾ **9,039** ದೂರುಗಳನ್ನು ಇತ್ಯರ್ಥಪಡಿಸಲಾಗಿದೆ. ಇದಲ್ಲದೇ ಎನ್‌ಜಿಆರ್‌ಎಸ್ ಪೋರ್ಟ್‌ನಲ್ಲಿ **5,626** ದೂರುಗಳನ್ನು ನಾಗರಿಕರು ನೋಂದಾಯಿಸಿದ್ದು ಇವುಗಳಲ್ಲಿ **5,345** ದೂರುಗಳನ್ನು ಇತ್ಯರ್ಥಪಡಿಸಲಾಗಿದೆ.

**4. ಸಿ–ವಿಜಿಲ್:**

ಸಿ–ವಿಜಿಲ್ ಅಪ್ಲಿಕೇಷನ್ ಮೂಲಕ **3,822** ದೂರು ಸ್ವೀಕರಿಸಲಾಗಿದ್ದು ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಪರವಾನಿಗೆ ಇಲ್ಲದ ಪೋಸ್ಟರ್/ಬ್ಯಾನರ್ ಅಂಟಿಸಿದ ಪ್ರಕರಣಗಳು **2,172,** ಹಣ ಹಂಚಿಕೆ ಪ್ರಕರಣಗಳು **56,** ಕಡ್ಡಾಯವಾಗಿ ಮಾಡಬೇಕಾದಲ್ಲದ ಪೋಸ್ಟರ್ ಪ್ರಕರಣಗಳು **148,** ಬಂದೂಕುಗಳ ಪ್ರದರ್ಶಿಸಿ ಬೆದರಿಸಿದ ಪ್ರಕರಣಗಳು **48,** ಉಡುಗೊರೆ, ಕೂಪನ್ ಹಂಚಿಕೆ ಪ್ರಕರಣಗಳು **48,** ಮದ್ಯ ಹಂಚಿಕೆ ಪ್ರಕರಣಗಳು **29,** ಆಸ್ತಿ ಹಾನಿಗೊಳಿಸಿದ ಪ್ರಕರಣಗಳು **240,** ಪರವಾನಿಗೆ ಇಲ್ಲದ ವಾಹನ ಅಥವಾ ಬೆಂಗಾವಲು ಪಡೆ ಪ್ರಕರಣಗಳು **66,** ದಾಖಲಾಗಿದ್ದು, ಈ ಪೈಕಿ **3,197** ದೂರುಗಳು ನಿಜವೆಂದು ಕಂಡುಬಂದಿದ್ದು ಸೂಕ್ತ ಕ್ರಮ ಕೈಗೊಳ್ಳಲಾಗಿದೆ.

**5. ಮಾಧ್ಯಮ:**

ವಿವಿಧ ಮಾಧ್ಯಮಗಳ ಮೂಲಕ ದೂರುಗಳನ್ನು ಸ್ವೀಕರಿಸಲಾಗಿದ್ದು, ಇಮೇಲ್ ಮೂಲಕ **211** ಮತ್ತು ಪತ್ರಗಳ ಮೂಲಕ **272** ಸುದ್ದಿಪತ್ರಿಕೆಗಳಿಂದ **78,** ಟಿ.ವಿ ಚಾನಲ್‌ಗಳಿಂದ **37** ಮತ್ತು ಸಾಮಾಜಿಕ ಜಾಲತಾಣಗಳಿಂದ **58** ಸೇರಿದಂತೆ ಒಟ್ಟು **656** ದೂರುಗಳು ಬಂದಿದ್ದು **446** ದೂರುಗಳನ್ನು ವಿಲೇವಾರಿ ಮಾಡಲಾಗಿದೆ.

**6. ಸುವಿಧಾ:**

ಸುವಿಧಾ ಅಡಿಯಲ್ಲಿ ವಿವಿಧ ಅನುಮತಿಗಳನ್ನು ಕೋರಿ ಇವರೆಗೆ ಒಟ್ಟು **6,796** ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಅದರಲ್ಲಿ **4,883** ಅರ್ಜಿಗಳಿಗೆ ಅನುಮತಿ ನೀಡಲಾಗಿದ್ದು, **1,282** ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಅವುಗಳಲ್ಲಿ **62** ಅರ್ಜಿಗಳು ಪ್ರಗತಿಯಲ್ಲಿವೆ. **409** ಬಾಕಿ ಉಳಿದಿದ್ದು, **160** ಅರ್ಜಿಗಳು ರದ್ದಾಗಿರುತ್ತವೆ.